ii) ಫೈಲ್ ಮಾಡಿರುವ ಪ್ರಕರಣಗಳ ಸಂಖ್ಯೆ :

೧೯೮೬-೮೭	...	ಇಲ್ಲ
೧೯೮೭-೮೮	...	ಇಲ್ಲ

ಒಂದು ಪ್ರಕರಣದಲ್ಲಿ 'ಬಿ' ವರದಿಯನ್ನು ಸಲ್ಲಿಸಲಾಗಿದೆ. ಇನ್ನುಳಿದ ಪ್ರಕರಣಗಳು ತನಿಖೆಯಲ್ಲಿವೆ.

ಕಾಕಂಬಿಯ ನಿಯಂತ್ರಣದಿಂದ ಸರ್ಕಾರಕ್ಕೆ ಬರಬೇಕಾದ ಆದಾಯದ ನಷ್ಟದ ಬಗ್ಗೆ

೧೬೦೩. ಶ್ರೀ ಎ. ಜಿ. ದೇಸಾಯಿ (ಧಾರವಾಡ-ಗ್ರಾಮೀಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಕಂಬಿಯ ಮೇಲೆ ಕೇಂದ್ರ ಸರ್ಕಾರದ ನಿಯಂತ್ರಣವಿರುವುದರಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದ ಆದಾಯ ನಷ್ಟವಾಗುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕೇಂದ್ರ ಸರ್ಕಾರದ ನಿಯಂತ್ರಣ ತೆಗೆದು ಹಾಕಿದಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯ ಎಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ ಮಾನ್ಯ ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಹಾಗೂ ವಿದ್ಯುತ್ ಮಂತ್ರಿ ಅವರ ಪರವಾಗಿ), ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೫ (ಎ) ಕಲಮಿನ ಮೇರೆಗೆ—

೧೯೮೫-೮೬ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ಮೊದಲನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಚಂದ್ರಶೇಖರಿರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿ ಅವರ ಪರವಾಗಿ).— ೧೯೬೪ನೇ ಇಸವಿಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಶಾಸನದ ೨೫ (೫ಎ) ಕಲಮಿನ ಮೇರೆಗೆ

೧೯೮೧-೮೨, ೧೯೮೨-೮೩ ಮತ್ತು ೧೯೮೩-೮೪ನೇ ಸಾಲುಗಳ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಲೆಕ್ಕಪತ್ರ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಶಿಡ್ಲಘಟ್ಟದಲ್ಲಿ ನಡೆದ ಕೋಮುಗಲಭೆ ಬಗ್ಗೆ

ಅಧ್ಯಕ್ಷರು.— ನಿನ್ನೆ ನಡೆದಂತಹ ಘಟನೆಯ ಬಗ್ಗೆ, ಮಾನ್ಯ ವೆಂಕಟರಾಮಯ್ಯನವರು ಮತ್ತು ತಾವು ನೋಟೀಸ್ ಕೊಟ್ಟಿದ್ದೀರಿ ಶಿಡ್ಲಘಟ್ಟದಲ್ಲಿ ನಡೆದಿರತಕ್ಕ ಘಟನೆ ಬಗ್ಗೆ ಚರ್ಚೆ ಮಾಡಲಿಕ್ಕೆ ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳಲಿಕ್ಕಾಗದಕ್ಕೆ ಆಗುವುದಿಲ್ಲ. ಅದನ್ನು ಗಮನ ಸೆಳೆಯುವ

ಸೂಚನೆಗೆ ಕನ್ವರ್ಟ್ ಪ್ರಾಡಿ ಇವತ್ತಿನ ದಿವಸ ಇಟ್ಟಿದ್ದೇನೆ. ಥೂಲ್ ಪ್ರಕಾರ ಒಂದು ಗಂಟೆ ಮೊದಲೇ ಕೊಡಬೇಕು. ಆದರೂ ಅದು ಮಹತ್ವವಾಗಿರುವುದರಿಂದ ಕಾಲಿಂಗ್ ಅಟೆನ್ಷನ್‌ಗೆ ಕನ್ವರ್ಟ್ ಮಾಡಿದ್ದೇನೆ. ಆವರದು ಕಾಲಿಂಗ್ ಅಟೆನ್ಷನ್ ಇದೆ. ನಿಮ್ಮದನ್ನು ಕಾಲಿಂಗ್ ಅಟೆನ್ಷನ್ ಮೂಲಕ ತೆಗೆದುಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್, ನಾಗರತ್ನಮ್ಮ.— ವಿಷಯ ಒಂದೇ ಇರಬಹುದು, ನಾವು ಪ್ರೆಸೆಂಟ್ ಮಾಡುವುದು ಬೇರೆ. ಆವರು ಹೇಳುವುದು ಬೇರೆ.

ಅಧ್ಯಕ್ಷರು.— ನೀವು ಗಮನ ಸೆಳೆಯಿರಿ, ವಿರೋಧ ಪಕ್ಷದ ನಾಯಕರಿಗೆ ೫ ನಿಮಿಷ ಅವಕಾಶ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಗಮನ ಸೆಳೆಯುವುದು ಬೇರೆ ನಾನು ಹೇಳುವುದು ಬೇರೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಲುವಳಿ ಸೂಚನೆಯನ್ನು ಕಾಲಿಂಗ್ ಅಟೆನ್ಷನ್‌ಗಿಂತ ಮುಂಚೆ ತೆಗೆದುಕೊಳ್ಳಬೇಕು. ವಿಷಯ ಮಹತ್ವವಾಗಿರುವುದರಿಂದ ನಾವು ರೈಸ್ ಮಾಡಿದ್ದೇವೆ. ಇದನ್ನು ಕಾಲಿಂಗ್ ಅಟೆನ್ಷನ್‌ನಲ್ಲಿ ತೆಗೆದುಕೊಳ್ಳಿ ಎಂದರೆ ಹೇಗೆ ಬರುತ್ತದೆ ?

ಅಧ್ಯಕ್ಷರು.— ತಾವು ಸ್ವಲ್ಪ ತಡೆಯಿರಿ. ನಿಮಗೆ ಚರ್ಚೆಯಾಗಬೇಕು, ನಿಮಗೆ ಅವಕಾಶ ಮಾಡಿ ಕೊಡುತ್ತೇನೆ. ನೋಟೀಸ್ ಅಂಡರ್ ರೂಲ್ ೬೯ ಏನು ಹೇಳುತ್ತದೆ ಎಂದರೆ ಅದನ್ನು ನಾನು ಹೇಳುತ್ತೇನೆ.

Already I have converted is as Calling Attention, ನಾನು ಹೇಳುವುದನ್ನು ಕೇಳಿರಿ.

> "Hon'ble Members who desire to give notice of adjournment motion on a matter of Urgent Public Importance Under Rule 59 of the Rules of Procedure and Conduct of Business in the Legislative Assembly are hereby requested to send the notice atleast one hour before the commencement of the sittings on that day Notices received after the stipulated time will be considered as notices received for the next day"

೧೨-೩೦ ಪಿ.ಎಂ.

ಆದ್ದರಿಂದ ತಾವು ಹತ್ತೂವರೆ ಗಂಟೆಗೆ ಕೊಟ್ಟಿದ್ದರಿಂದ ಮಂತ್ರಿ ಹತ್ತು ಗಂಟೆಗೆ ಮೊದಲು ಕೊಡದೇ ಇರುವುದರಿಂದ, ತಮ್ಮದು ಪ್ರೈವಾಷೇಸಿ ಕೇಸ್ ಇದೆಯೋ ಇಲ್ಲವೋ ಎಂಬುದನ್ನು ಹೇಳಲು ಅವಕಾಶ ಕೊಡಬೇಕು ಎಂದರೆ ನಾಳೆ ತಾವು ಹೇಳಿರಿ, ತಮಗೆ ಅವಕಾಶ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಟೈಮ್ ಮಿರಿ ಬಂದರೂ ಕೂಡ ನಾಳೆ ಇರುವ ಬದಲು ಈವತ್ತೇ ಇದನ್ನು ಚರ್ಚಿಸ ಬಹುದೆಂಬ ಉದ್ದೇಶದಿಂದ ನಾನು ಈವತ್ತು ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಿ ಇಟ್ಟಿದ್ದೇನೆ. ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಇದರಲ್ಲಿ.....

ಅಧ್ಯಕ್ಷರು.— ತಾವು ತಡವಾಗಿ ಕೊಟ್ಟಿದ್ದರಿಂದ ನಾಳೆ ಬರುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಏನು ಹೇಳುತ್ತೇನೆ ಎಂಬುದನ್ನು ಸ್ವಲ್ಪ ಕೇಳುತ್ತೀರಾ ? ನಾಳೆ ಹಬ್ಬ ಇದೆ.

ಅಧ್ಯಕ್ಷರು.— ತಾವು ಬುದ್ಧಿವಂತರು. ಹನ್ನೊಂದು ಗಂಟೆಗೆ ಸಭೆ ಚಾಲೂ ಆಗುತ್ತದೆ. ನಿಮ್ಮ ಸೂಚನೆಯನ್ನು ಒಂದು ಗಂಟೆ ಮೊದಲು ಕೊಡಬೇಕಾಗುತ್ತದೆ. ಹತ್ತು ಗಂಟೆಗೆ ಮೊದಲು ಕೊಟ್ಟಿದ್ದರೆ

ನಾನು ಇವತ್ತು ಇಡುತ್ತಿದ್ದೆ. ರಿಜೆಕ್ಟ್ ಮಾಡುವುದೋ ಅಥವಾ ಅಕ್ಸೆಪ್ಟ್ ಮಾಡುವುದೋ ಅದನ್ನು ಮಾಡುತ್ತಿದ್ದೆ. ಆದರೆ ತಾವು ಹತ್ತೂವರೆಗೆ ಕೊಟ್ಟಿರುವುದರಿಂದ ತಮಗೂ ಚರ್ಚೆಗೆ ಅವಕಾಶ ಕೊಡ ಬೇಕೆಂದು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತಿಸಿದ್ದೇನೆ. ಅದು ಈಗಲೇ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ತಾವು ಹೇಳಿದ್ದು ಆಯಿತು. ನಾನು ಹೇಳುವುದನ್ನು ಸ್ವಲ್ಪ ಕೇಳುತ್ತೀರಾ ?

ಅಧ್ಯಕ್ಷರು.— ತಾವು ಈ ತರಹ ಟೈಮ್ ವೇಸ್ಟ್ ಮಾಡಿದರೆ ಹೇಗೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾವು ಇಲ್ಲಿ ಟೈಮ್ ವೇಸ್ಟ್ ಮಾಡುವುದಕ್ಕೆ ಅಂತ ಬಂದಿದ್ದೀವಾ ?

SRI M. MALLIKARJUNA KHARGE.— Whether you accept or reject we have no objection but you should have the patience to listen to us atleast.

ಅಧ್ಯಕ್ಷರು.— ತಾವು ನನ್ನ ಛೇಂಬರ್‌ಗೆ ಬಂದಿದ್ದಿರಿ. ನಾನು ಏನು ಹೇಳಿದ್ದೇನೆ ತಮಗೆ ಶ್ರೀ ಮೊಯಿಲಿಯವರು ಬಂದಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನನಗೆ ಏನೂ ಹೇಳಿಲ್ಲ.

ಅಧ್ಯಕ್ಷರು.— ಶ್ರೀ ಬಸವಲಿಂಗಪ್ಪನವರೇ, ನೀವುಹೇಳಿ. ನಾನು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ — ಈಗ ನಮ್ಮ ನಾಯಕರು ಏನು ಹೇಳುತ್ತಾರೋ ಹೇಳಲಿ. ನನಗೆ ಇದರ ಹಿನ್ನಲೆ ಯಾವುದಂ ಎಂದು ಗೊತ್ತಿಲ್ಲ? ನೋಟೀಸ್ ವಿಚಾರ ನನಗೆ ಗೊತ್ತಿಲ್ಲ. ಇದು ಗೊತ್ತಿಲ್ಲ ದಿದ್ದಾಗ ತಾವು ಕರೆದಿರಿ ನಾನು ಬಂದಿದ್ದೆ., ಬಂದು ಎದ್ದುಬಂದೆ.

ಅಧ್ಯಕ್ಷರು.—ಗೊತ್ತಿಲ್ಲ ಎಂದರೆ ಶ್ರೀ ಮೊಯಿಲಿಯವರು ಬಂದಿದ್ದರು. I have already Intimated.

ಶ್ರೀ ಆರ್. ವೆಂಕಟರಾಮಯ್ಯ.— ನಾನು ನಿನ್ನೆ ನನ್ನ ಸೂಚನೆಯನ್ನು ಕೊಟ್ಟಿದ್ದೇನೆ. ನನಗೆ ಅವಕಾಶ ಕೊಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅಧ್ಯಕ್ಷರೇ ..

ಅಧ್ಯಕ್ಷರು.— ನಾನು ತಮಗೆ ಇನ್ನೊಮ್ಮೆ ಓದಿ ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನನಗೆ ಅರ್ಥ ಆಗುತ್ತದೆ.

ಅಧ್ಯಕ್ಷರು.—ಈಗ ತೆಗೆದುಕೊಳ್ಳಬೇಕು ಎಂದರೆ ತೆಗೆದುಕೊಳ್ಳಲಿಕ್ಕೆ ಬರಾವುದಿಲ್ಲ. ನೀವು ಹೇಳು ವುದಿದ್ದರೆ ನಾಳೆ ಹೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಬರೆದಿದ್ದಲ್ಲ ಈ ಪುಸ್ತಕ.

(ಗೊಂದಲ)

ಶ್ರೀ ಆರ್. ವೆಂಕಟರಾಪಂಯ್ಯ.— ನನಗೆ ದಯವಿಟ್ಟು ಅವಕಾಶ ಕೊಡಿ. ನಾನು ನಿನ್ನೆ ಹತ್ತೂವರೆ ಗಂಟೆಗೆ ನಿಲುಂದಳಿ ಸೂಚನೆ ಕಳಿಸಿದಾಗ ತಾವು ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಕನ್ವರ್ಟ್ ಮಾಡಿದ್ದೇನೆ ಎಂದು ಹೇಳಿದಿರಿ. ಈಗ ಅವರಿಗೆ ಅವಕಾಶ ಕೊಡುವುದಾದರೆ ನನಗೂ ಅವಕಾಶ ಕೊಡಿ.

ಅಧ್ಯಕ್ಷರು.— ಅವರಿಗೆ ಅವಕಾಶ ಕೊಟ್ಟಿಲ್ಲ,

ಶ್ರೀ ಆರ್. ವೆಂಕಟರಾಮಯ್ಯ.— ಹಾಗಾದರೆ ನನಗೆ ಮೊದಲು ಅವಕಾಶ ಕೊಡಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ನಾನು ಪುಸ್ತಕದಲ್ಲಿರುವುದನ್ನು ಓದುತ್ತಿದ್ದೇನೆ. ಇದು ನಾನು ಬರೆದದ್ದು ಅಲ್ಲವಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಇಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಮಾನ್ಯಸದಸ್ಯರು ನಿಲುವಳಿ ಸೂಚನೆಯನ್ನು ತಂದಿರತಕ್ಕಂಥ ವಿಚಾರ ನಿನ್ನೆ ಆದದ್ದು ಅಲ್ಲ, ಮೊನ್ನೆ ಆದದ್ದು. ೧೫ನೇ ತಾರೀಕಿಗೆ ಘಟಿಸಿದಂಥ ಒಂದು ಘಟನೆ ವಿಚಾರದಲ್ಲಿ ಈ ನಿಲುವಳಿ ಸೂಚನೆಯನ್ನು ಅವರು ತಂದಿದ್ದಾರೆ, ಇದೇ ವಿಷಯವನ್ನು ಪ್ರಸ್ತಾಪಿಸಿ ಮಾನ್ಯ ವೆಂಕಟರಾಮಯ್ಯನವರು ನಿನ್ನೆ ನಿಲುವಳಿ ಸೂಚನೆಯನ್ನು ತಂದಿದ್ದರು. ತಾವು ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದು ಬೇಡ, ಏಕೆಂದರೆ ಇದು ಲಾ ಆಂಡ್ ಆರ್ಡರ್‌ಗೆ ಸಂಬಂಧಪಟ್ಟಂಥ ವಿಚಾರ, ನಿಲುವಳಿ ಸೂಚನೆ ತೆಗೆದುಕೊಳ್ಳುವಂಥ ಅರ್ಹವಾದ ವಿಚಾರ ಆಗುವುದಿಲ್ಲ. ಆದ್ದರಿಂದ ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಮಾರ್ಪಾಟು ಮಾಡಿ ತೆಗೆದುಕೊಳ್ಳುತ್ತೇನೆ ಎಂದು ತಾವು ಹೇಳಿದ್ದೀರಿ. ಆದನ್ನು ಅವರು ಒಪ್ಪಿಕೊಂಡಿದ್ದರು. As regards law & order is concerned, ಈಗ ಮೊನ್ನೆ, ಮತ್ತು ನಿನ್ನೆ ಮಧ್ಯದಲ್ಲಿ ಯಾವುದೇ ಹೊಸ ಘಟನೆ ಆಗಿಲ್ಲ. ಏನಾದರೂ ಹೊಸ ಘಟನೆ ಆಗಿದ್ದರೆ, ಆ ಮಾತು ಬೇರೆ ಆಗಿತ್ತು. ಯಾವ ವಿಷಯದ ಬಗ್ಗೆ ಮಾನ್ಯ ಸದಸ್ಯರು ಒಂದು ಸೂಚನೆಯನ್ನ್ನೆ ಕಳುಹಿಸಿದರೋ ಮಂತ್ರಿ ಆದಕ್ಕೆ ನಿಮ್ಮ ರೂಲಿಂಗ್‌ನ್ನು ಒಪ್ಪಿಕೋಡರೋ ಈಗ ಮಂತ್ರಿ ಆದೇ ವಿಷಯದ ಬಗ್ಗೆ ಇವತ್ತು ನಿಲುವಳಿ ಸೂಚನೆಯನ್ನು ಕೇಳುವುದು, it is unreasonable. It is unfair to Mr. Venkataramaiah.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆಯೇ ಈ ವಿಚಾರವನ್ನು ಎತ್ತಬೇಕಾಗಿತ್ತು. ನಿನ್ನೆ ಏಕೆ ಎತ್ತಲಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್.—ಈ ವಿಷಯವನ್ನು ಎತ್ತಿ, ಸೂಕ್ತ ನಿರ್ಣಯಕ್ಕಾಗಿ ತಮ್ಮ ಅವಗಾಹನೆಗಾಗಿ ಬಿಟ್ಟಿದ್ದಾರೆ. ತಾವು ನಿಯಮದ ಪ್ರಕಾರ ರೂಲಿಂಗ್ ಕೊಟ್ಟರೆ ಸರಿ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದಕ್ಕೂ ಬಿಡದೇ ಹೋದರೆ, ವಿರೋಧಪಕ್ಷದ ನಾಯಕರು ಏಕೆ ಇರಬೇಕು ? ಅವರು ಯಾವುದಾದರೂ ರೂಲ್ ಕೋಟ್ ಮಾಡುತ್ತಾರೆ. ರೂಲ್ ತಪ್ಪಿದ್ದರೆ ಮಾನ್ಯ ನಾಯಕರು ಇದ್ದಾರೆ, ಇದು ತಪ್ಪು ಎಂದು ಹೇಳಲಿ. ಆದ್ದರಿಂದ ಅವರು ಈಗ ಓದಿ ಹೇಳುತ್ತಾರೆ, ಕೇಳಿ. ಆಮೇಲೆ ನೀವು ಕೊಟ್ಟಂಥ ಆಜ್ಞೆಗೆ ನಾವು ತಲೆಬಾಗುತ್ತೇವೆ.

ಅಧ್ಯಕ್ಷರು.—ಮಾನ್ಯ ನಾಗರತ್ನಮ್ಮನವರೇ, ನಿಮ್ಮ ಅಡ್ಜರ್ನ್‌ಮೆಂಟ್ ಮೋಷನ್ ನಮ್ಮ ಆಫೀಸಿಗೆ ಹತ್ತೂವರೆ ಘಂಟೆಗೆ ಬಂದಿದೆ. ಇದು ೧೦ ಗಂಟೆಗೆ ಮೊದಲೇ ಬರಬೇಕಾಗಿತ್ತು. ಆದಾಗ್ಯೂ, ನಾನು ಏನು ಮಾಡುತ್ತೇನೆ ಎಂದರೆ.....

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್.— ನೀವು ಇವತ್ತಾದರೂ ತೆಗೆದುಕೊಳ್ಳಿ. ನಾಳೆಯಾದರೂ ತೆಗೆದುಕೊಳ್ಳಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ನಮಗೆ ಕೊಟ್ಟಿರತಕ್ಕಂಥ reply ಇಲ್ಲಿದೆ, ತಾವು ಏನೆಂದು ಕೊಟ್ಟಿದ್ದೀರಿ ಎಂದರೆ,

> "Sub ; Matter under Rule 59 regarding communal disturbance at Shidlaghatta adjournment motion notice regarding.
>
> I am directed to state that the notice of Adjournment Motion under Rule 59 was given by you, has been received in this Secretariat at 10-35 A.M. As per the Rule 59 of Rules of Procedure in Karnataka Legislative Assembly and according to the directions issued by the Hon'ble Speaker,

the notice of adjournment motion should have been given one hour before the sitting of the House. No reason is assigned for the delay in giving the Notice.

Sri R. Venkataramaiah, Hon'ble Member has given notice of adjournment motion on the same subject yesterday the 16th and Hon'ble Speaker has with-held the consent and converted it as CAN which is included in to-day's Agenda.

Hence I am directed by the Hon'ble Speaker request you to participate in the discussion on Calling Attention Notice which comes for discussion today."

It is stated that "no reason is assigned for the delay in giving notice"

But in exceptional cases, you can permit. It is stated to Kaul and Shakdhar.

ಇದು ಪಾರ್ಲಿಮೆಂಟ್‌ನಲ್ಲೂ ಇದೆ. ಈ ದೃಷ್ಟಿಯಿಂದ ನವಂಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದರೆ ಹೇಗೆ ? ರೂಲ್ ೬೦ರ ಪ್ರಕಾರ.

"Notice of an adjournment motion shall be given before the commencement of the sitting on the day on which the motion is proposed to be made to each of the following :

i) The Speaker.

ii) The Minister concerned, and

iii) The Secretary.

Rule-59 says.

"Subject to the provisions of these rules, a motion for an adjournment of the business may be made with the consent of the Speaker."

ನಿಮ್ಮ ಹತ್ತಿರ ಕೇಳುವುದಕ್ಕೆ ನಿಂತಿದ್ದೇವೆ. ತಮ್ಮ ವಾದ ಏನಿದೆ ಎಂದರೆ, ರೂಲ್‌ಬುಕ್‌ನಲ್ಲಿ ಸ್ಪೀಕರ್ ಅವರು ಒಂದು ಸುತ್ತೋಲೆ ಇಷ್ಯೂ ಮಾಡಿದ್ದಾರೆ. ಒಂದು ಗಂಟೆ ಮುಂಚಿತವಾಗಿ ಕೊಡಬೇಕು ಎಂದು, ಆದ್ದರಿಂದ ಇದು ನಿಲುವಳಿ ಸೂಚನೆಗೆ ಬರುವುದಿಲ್ಲ ಎಂದು ಹೇಳಿದ್ದೀರಿ. But in exeptional cases, Speaker has power to admit and it will be deemed to have been given one hour before.

MR. SPEAKER.—I do agree. ಮಾನ್ಯ ಬೊಮ್ಮಾಯಿಯವರು ಏನೋ ಹೇಳುತ್ತಾರೆ, ಶ್ರೀಮತಿ ನಾಗರತ್ನಮ್ಮನವರೇ ತಡೆಯಿರಿ ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ತಪ್ಪು ಮಾಡಬಾರದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ಮನೆಯಲ್ಲೇ ಈ ವಿಚಾರವಾಗಿ, ಈಗಾಗಲೇ ಮಾನ್ಯ ಸಭಾನಾಯಕರು ಹೇಳಿದಂತೆ, ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ನಿನ್ನೆ ದಿವಸವೇ ಅಡ್ಜರ್ನ್‌ಮೆಂಟ್ ಮೋಷನ್ ಒಂದನ್ನು ತಮಗೆ ಕೊಟ್ಟಿದ್ದರು ಇದೇನೂ ಪ್ರೈವೆಟ್ ಆಗಿ ನಡೆದಂಥ ವಿಚಾರ ವಲ್ಲ. ನಿನ್ನೆ ದಿವಸ ಈ ವಿಚಾರದಲ್ಲಿ ಒಬ್ಬ ಸದಸ್ಯರು ಕೊಟ್ಟಂಥ ಮೋಷನ್ ಮೇಲೆ ತಾವು ನಿರ್ಣಯ ಕೊಟ್ಟಿದ್ದೀರಿ. ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ ಎಂದು ತಮ್ಮ ಕನ್‌ಸೆಂಟ್ ವಿಥ್‌ಹೆಲ್ಡ್

ಮಾಡಿರುತ್ತೀರಿ. ಹಾಗೂ ಇದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿರುತ್ತೀರಿ. ಇದನ್ನು ನಿನ್ನೆಯೇ ತಾವು ಹೇಳಿದ್ದೀರಿ. ಸದಸ್ಯರು ಯಾರೇ ಆಗಿರಬಹುದು, ಮಾನ್ಯ ವೆಂಕಟರಾಮಯ್ಯನವರೇ ಆಗಿರಬಹುದು ಮಾನ್ಯ ಖರ್ಗೆಯವರೇ ಆಗಿರಬಹುದು:

ಶ್ರೀ ಕೆ.ಹೆಚ್. ಪಾಟೀಲ್.—ನಾವು ಮಾನ್ಯ ವೆಂಕಟರಾಮಯ್ಯನವರ ವಿರುದ್ಧವಾಗಿ ಹೇಳುತ್ತಿಲ್ಲ ಅವರೂ ಕೇಳಲಿ. ಆದರೆ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಅದನ್ನು ಕೇಳಲಿ. ಕೇಳಿದ ಮೇಲೆ ಏನಾದರೂ ಹೇಳಲಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನಂ ಹೇಳುವುದು ಇಷ್ಟೇ. ಈ ವಿಚಾರದಲ್ಲಿ ತಾವು ಈಗಾಗಲೇ ನಿರ್ಣಯ ಕೊಟ್ಟಿದ್ದೀರಿ ಈ ಪಂಸೆಯಲ್ಲಿರುವ ನಾವೆಲ್ಲರೂ ಆ ನಿರ್ಣಯವನ್ನು ಕೇಳಿದ್ದೇವೆ, ಹಾಗೂ ಒಪ್ಪಿಕೊಂಡಿದ್ದೇವೆ. ಆದುದರಿಂದ ಪುನಃ ಇದೇ ವಿಚಾರದಲ್ಲಿ ಅಡಜರ್ನ್‌ಮೆಂಟ್ ಮೋಷನ್ ಕೊಡುವುದಕ್ಕೆ ಬರುತ್ತದೆಯೇ ಹೇಗೆ ? ಇದರ ಬಗ್ಗೆ ಕಮಿಟ್‌ಮೆಂಟ್ ಆಗಿಹೋಗಿದೆ. ಪುನಃ ಅವಕಾಶ ಕೊಟ್ಟರೆ ಅದು ಎಸ್ಪೇಕ್ ಆಗುತ್ತದೆ, ಇರ್ರೆಗ್ಯುಲರ್ ಆಗುತ್ತದೆ. On the same Motion, when you have given a ruling, ಇದರ ಮೇಲೆ ಪುನಃ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ ಇವತ್ತು ಒಂದು ಘಂಟೆ ಹೆಚ್ಚು ಕಡಿಮೆ ಕೊಟ್ಟರೆ, ಟೈಮ್ ಬಗ್ಗೆ ಡಿಸ್ಕ್ರಿಷನ್ ಇದೆ, ತಾವು ಅವಕಾಶ ಕೊಡಬಹುದು. ಆದರೆ ಟಿಕ್ನಿಕಾಲಿಟೀಸ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದೇ ವಿಚಾರದಲ್ಲಿ ಸಭಾಧ್ಯಕ್ಷರು ನಿರ್ಣಯ ಕೊಟ್ಟಿದ್ದಾರೆ, ಆದುದರಿಂದ ಅದನ್ನು ಪುನಃ ಎತ್ತುವುದಕ್ಕೆ ಬರುವುದಿಲ್ಲ. ಕಾಲಿಂಗ್ ಅಟೆಷನ್ ತೆಗೆದುಕೊಂಡಾಗ ಅವರಿಗೂ ಅವಕಾಶ ಕೊಡಿರಿ.

ಅಧ್ಯಕ್ಷರು.—ಅದೇನೂ ಓದಿ ಹೇಳುತ್ತೀನಿ ಎಂದರಲ್ಲಾ, ಓದಿ ಹೇಳಿ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಹೇಳಬೇಕಾದುದನ್ನು ಅವರೂ ಹೇಳಿದರೂ, ಇವರೂ ಹೇಳಿದರು, ಬೇರೆಯವರು ತಂದ ಕಾಲಿಂಗ್ ಅಟೆನ್‌ಷನ್ ನೋಟೀಸ್ ಮೇಲೆ ಯಾರೂ ಮಾತನಾಡುವ ಅಭ್ಯಾಸ ಇಲ್ಲ. ಆದರೂ ಸಹ ಅದರ ಮೇಲೆ ಮಾತನಾಡುವುದಕ್ಕೆ ತಾವು ಪರ್ಮಿಷನ್ ಕೊಟ್ಟಿದ್ದೀರಿ. ಇದಕ್ಕಾಗಿ ತಮಗೆ ಧನ್ಯವಾದ ಅರ್ಪಿಸುತ್ತೇನೆ.

ಅಧ್ಯಕ್ಷರು.—ನಾನು ಇದರ ಮೇಲೆ ಮಾತನಾಡುವುದಕ್ಕೆ ಇನ್ನೂ ಅವಕಾಶ ಕೊಟ್ಟಿಲ್ಲ. I have given a ruling that your adjournment Motion has been converted into Calling Attention to be taken up today only.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅದೇನೂ ನಿಮ್ಮ ಲೆಟರ್‌ನಲ್ಲಿ ಇಲ್ಲ.

ಅಧ್ಯಕ್ಷರು.—ಅದೇನು ಓದಿ ಹೇಳಿರಿ, ಹೊಸದೇನಾದರೂ ಇದ್ದರೆ ನೋಡೋಣ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಇದು ಬಹಳ ಹಳೆಯದು, ನನ್ನ ಕಾಲದಲ್ಲೂ ಇತ್ತು, ಇದೇನೂ ಹೊಸದಲ್ಲ. ನನಗೆ ಹಿಂದಿನ ಕಾಲದಿಂದಲೂ ಇದೆ. ಅದನ್ನೇ ಓದಿ ಹೇಳುತ್ತೇನೆ,

I am referring from Kaul and Shakder's Parliamentary Procedure and Practice :

> "Whereas when a Member address a Notice to the Speaker personally before ten hours and hands in a copy to the Secretary General, the Speaker may, in exceptional cases to be explained by the Member to the satisfaction of the Speaker, hold that the Notice may be deemed to have been received in time.'

ಇದು ಸರಿಯಲ್ಲ, ತಪ್ಪಲ್ಲ ಎಂದು ನಾನು ಚೀಫ್ ಮಿನಿಸ್ಟರ್ ಕೈಯಲ್ಲಿ, ರವಿನ್ಯೂ ಮಿನಿಸ್ಟರ್ ಕೈಯಲ್ಲಿ ಹೇಳಿಸಿಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ. ಅದನ್ನು ತಾವು ಹೇಳಬೇಕು. ಶಂಖದಿಂದಲೇ ತೀರ್ಥ ಬೀಳಬೇಕು, ನೀವೇ ಇದನ್ನು ಹೇಳಬೇಕು. ನಾನು ಹೇಳಬೇಕೆಂದಿರುವ ಒಂದು ಉದ್ದೇಶ ಎಂದರೆ, ನಾಳೆ ದಿವಸ ಹಬ್ಬ ಇರುವುದರಿಂದ, ಅಲ್ಲಿ ಕಮ್ಯುನಲ್ ಡಿಸ್ಟರ್ಬೆನ್ಸ್ ಆಗಿರುವುದರಿಂದ, ನನಗೆ ಇದರ

ಮೇಲೆ ಮಾತನಾಡಲು ಟೈಮ್ ಕೊಡಬೇಕು. ದಯವಿಟ್ಟು ಟೈಮ್ ಕೊಡಬೇಕು. ಇದು ಆರ್ಜೆಂಟ್ ಮ್ಯಾಟರ್ ಆಗಿರುವುದರಿಂದ ದಯವಿಟ್ಟು ದೊಡ್ಡ ಮನಸ್ಸು ಮಾಡಿ ಇದರ ಬಗ್ಗೆ ಚರ್ಚೆ ಮಾಡಲು ಟೈಮ್ ಕೊಡಿರಿ ಎಂದು ಬೇಳುತ್ತೇನೆ. ನಾನು ಇನ್ನೇನೂ ಹೇಳುವುದಿಲ್ಲ.

ಅಧ್ಯಕ್ಷರು.—ರೂಲ್ಸ್‌ನಲ್ಲಿ ಏನಿದೆ ಎಂದರೆ ''The Speaker may, under special circumstances'' ಎಂದು ಇದೆ. ಸ್ಪೆಷಲ್ ಸರ್ಕಂಸ್ಟೆನ್ಸಸ್ ಏನೆಂದರೆ, ನಿನ್ನೆ ಅವರು ಆಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದರು. ಅದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿ ಇವತ್ತು ಇಟ್ಟಿದ್ದೇನೆ. ನಿಮ್ಮದೂ ಕೂಡಾ ಆಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂಬ ದೃಷ್ಟಿಯಿಂದ ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿ ಈಗಿಂದ ಈಗಲೇ ಇಟ್ಟಿದ್ದೇನೆ. ಫಸ್ಟ್ ಇದೇ ಮ್ಯಾಟರ್ ತೆಗೆದುಕೊಂಡಿದ್ದೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಬಂದಿದ್ದರು. ಅವರಿಗೂ ಇದರ ಬಗ್ಗೆ ಹೇಳಿದ್ದೇನೆ. I have got highest regard for your Party. ಮಾನ್ಯ ವೀರಪ್ಪ ಮೊಯಿಲಿಯವರಿಗೆ ಕರೆದು ಹೇಳಿದ್ದೇನೆ, ಟೈಮ್ ವೇಸ್ಟ್ ಮಾಡುವುದು ಬೇಡ. ಚೀಫ್ ಮಿನಿಸ್ಟರ್ ಉತ್ತರ ಹೇಳಲ್ಲಿ. ಅವರು ಉತ್ತರ ಹೇಳಿದ ಮೇಲೆ ಕ್ಲಾರಿಫಿಕೇಷನ್ ಬೇಕಾದರೆ ಐದೈದು ನಿಮಿಷ ಕೇಳಿ ಎಂದು ಹೇಳಿದ್ದೇವೆ. ಅವರೂ ಯೆಸ್ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಸ್ವಲ್ಪ ಕೇಳಿ.

ಅಧ್ಯಕ್ಷರು.—ಸ್ವಲ್ಪನೂ ಇಲ್ಲ, ಏನೂ ಇಲ್ಲ. I have converted it into a calling Attention.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಅಧ್ಯಕ್ಷರೇ, ನಾಳೆ ರಂಜಾನ್ ಹಬ್ಬ ಇದೆ, ಎರಡೂ ಗುಂಪಿನವರಲ್ಲಿ ಘರ್ಷಣೆ ನಡೆದಿದೆ. ಕಾಲಿಂಗ್ ಅಟೆನ್‌ಷನ್ ಮೇಲೆ ಕ್ಲಾರಿಫಿಕೇಷನ್ ಕೇಳಬಹುದೇ ಹೊರತಾಗಿ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಆಗುವುದಿಲ್ಲ.

ಅಧ್ಯಕ್ಷರು.—ನೋಡಿ, ಚೀಫ್ ಮಿನಿಸ್ಟರ್‌ರವರು ಉತ್ತರ ಹೇಳಲಿ. ಆಮೇಲೆ ನಿಮಗೆ ಐದು ನಿಮಿಷ ಅವಕಾಶ ಕೊಡುತ್ತೇನೆ. ಕ್ಲಾರಿಫಿಕೇಷನ್ ಕೇಳಿ, ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಆಲ್ಲಿ ದುಖಾನುಗಳನ್ನು ಸುಟ್ಟಿದ್ದಾರೆ, ಮನೆಗಳನ್ನು ಸುಟ್ಟಿದ್ದಾರೆ ಸೈಕಲ್, ಮೋಟಾರ್ ಸೈಕಲ್‌ಗಳನ್ನು ಸುಟ್ಟಿದ್ದಾರೆ: ಫೋಲೀಸರು ಫೈರಿಂಗ್ ಮಾಡಿದ್ದಾರೆ. ಅದಕ್ಕೋಸ್ಕರ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೇಳಿದ್ದೇವೆ. ದಯವಿಟ್ಟು ಅವಕಾಶ ಕೊಡಬೇಕು. ಕಾಲಿಂಗ್ ಅಟೆನ್‌ಷನ್‌ನಲ್ಲಿ ಇದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಾವು ಮುಖ್ಯಮಂತ್ರಿಗಳ ಗಮನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆ

1) ಶಿಡ್ಲಘಟ್ಟದಲ್ಲಿ ದಿನಾಂಕ 15-5-1988ರಂದು ಮರುಕಳಿಸಿದ ಮತೀಯ ಗಲಭೆಯಿಂದಾಗಿರುವ ಅನಾಹುತಗಳ ಬಗ್ಗೆ.

ಅಧ್ಯಕ್ಷರು.—ವೆಂಕಟರಾಮಯ್ಯನವರು ಗಮನ ಸೆಳೆಯಲ್ಲಿ ಆಮೇಲೆ ನೋಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಇಲ್ಲ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆಯಲ್ಲಿ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.— ಇಲ್ಲ. ಆಗುವುದಿಲ್ಲ. ಮಾನ್ಯ ವೆಂಕಟರಾಮಯ್ಯನವರೇ ತಾವು ಗಮನ ಸೆಳೆಯಿರಿ.